RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ Volume 148	ಬೆಂಗಳೂರು, ಗುರುವಾರ, ಮೇ ೧೬, ೨೦೧೩ (ವೈಶಾಖ ೨೬, ಶಕ ವರ್ಷ ೧೯೩೫) Bangalore, Thursday, May 16, 2013 (Vaishakha 26, Shaka Varsha 1935)	ಸಂಚಿಕೆ ೨೦ Issue 20

ಭಾಗ ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ಪುರಸಭಾ ಕಾರ್ಯಾಲಯ, ಶಿಕಾರಿಪುರ–577427

ಸಾರ್ವಜನಿಕ ಪ್ರಕಟಣೆ

ನಂ. ಪುಶಿ/ನಿವೇಶನ/ಸಿಆರ್/67/2011–12, ದಿನಾಂಕ 04–03–2013

ಶಿಕಾರಿಪುರ ಪಟ್ಟಣದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿಕಾರಿಪುರ ಪಟ್ಟಣದ ಪುರಸಭೆ ಮಾಲೀಕತ್ವದ ಈ ಕೆಳಗೆ ವಿವರಿಸಿದ ನಿವೇಶನಗಳನ್ನು ಅವುಗಳ ಮುಂದೆ ಹೆಸರಿಸಿದ ಮನವಿದಾರರುಗಳಿಗೆ ಮಂಜೂರು ಮಾಡುವ ಬಗ್ಗೆ ದಿನಾಂಕ 19–11–2012 ರಂದು ಜರುಗಿದ ಪುರಸಭೆಯ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದ್ದರಿಂದ ಈ ಕುರಿತು ಕರ್ನಾಟಕ ಪುರಸಭೆಗಳ (ಗೈಡೆನ್ಸ್ ಆಫ್ ಆಫೀಸರ್ಸ್ ಗ್ರಾಂಟ್ ಆಫ್ ಕಾಪೀಸ್ ಮತ್ತು ಇತರೆ ಉಪ ಬಂಧಗಳು) 1966ರ ನಿಯಮ 39ರ ಪ್ರಕಾರ ಸಾರ್ವಜನಿಕರಿಂದ ಸಲಹೆ ಸೂಚನೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಅಸೆಸ್‌ಮೆಂಟ್ ನಂ.	ನಿವೇಶನದ ಅಳತೆ ಮತ್ತು ವರ್ಣನೆ	ಚಕ್ಕುಬಂದಿ		ಮನವಿದಾರರ ಹೆಸರು	ಉದ್ದೇಶ
1	2	3	4		5	6
1	777/777 /663	28' x 98' ಖಾಲಿ ನಿವೇಶನ	ಪೂರ್ವ	ಸ್ತ್ರೀ ಶಕ್ತಿ ಭವನ	ಅಧ್ಯಕ್ಷರು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಶಿಕಾರಿಪುರ	ಕನ್ನಡ ಸಾಹಿತ್ಯ ಪರಿಷತ್ ಕಟ್ಟಡ
			ಪಶ್ಚಿಮಕ್ಕೆ	ಗ್ರಂಥಾಲಯ		
			ಉತ್ತರಕ್ಕೆ	ಪುರಸಭೆ ಕಾಂಪ್ಲೆಕ್ಸ್ ಮತ್ತು ಖಾಲಿ ಜಾಗ		
			ದಕ್ಷಿಣಕ್ಕೆ	ಧನರಾಜ್ ಹೇಮರಾಜ್ ಶಾಲೆ		

ಆದ್ದರಿಂದ ಈ ಪ್ರಕಟಣೆ ಪ್ರಕಟಗೊಂಡ 30 ದಿನಗಳ ಒಳಗಾಗಿ ಏನಾದರೂ ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳಿದ್ದಲ್ಲಿ ನೀಡಬಯಸುವವರು ನೀಡಬಹುದಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ತಿಳಿಯುವುದು.

ಆಡಳಿತಾಧಿಕಾರಿ,
ಪುರಸಭೆ, ಶಿಕಾರಿಪುರ.

ಮುಖ್ಯಾಧಿಕಾರಿ,
ಪುರಸಭೆ, ಶಿಕಾರಿಪುರ.

P.D. 15

ಕಂದಾಯ ಸಚಿವಾಲಯ

ಭೂಸ್ವಾಧೀನ ಕಾಯ್ದೆ ಕಲಂ 17(1) ರ ಅನ್ವಯ ಕಲಂ 6(1)ರ ಅಂತಿಮ ಘೋಷಣೆ

ಕ್ರಮಾಂಕ : ಕಂಇ ಭೂಸ್ವಾ ಐಸಿಆರ್ 5/2012-13,

ದಿನಾಂಕ 18-04-2012

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆಯ ಉಪ ಕಾಲುವೆ ನಿರ್ಮಾಣದ ಸಲುವಾಗಿ ಅವಶ್ಯಕವಾಗಿ ಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರ ಪತ್ರ ಸಂ. ಎಲ್ಎಕ್ಯೂ ಸಿಆರ್ 74/2010-11, ದಿನಾಂಕ 4-11-2010 ರ ಅಧಿಸೂಚಿಯಲ್ಲಿ ತಿಳಿಯಪಡಿಸಲಾಗಿದೆ ಹಾಗೂ ದಿನಾಂಕ 23-12-2010 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಅಧಿನಿಯಮದ 17ನೇ ಪ್ರಕಟಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರಕಾರವು ಸದರಿ ಅಧಿನಿಯಮದ 9ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿವಸಗಳ ಮುಕ್ತಾಯದ ನಂತರ ಸದರಿ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದೆಂದು ನಿರ್ದೇಶಿಸಿರುತ್ತಾರೆ.

ಸದರಿ ಭೂ ಸ್ವಾಧೀನ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ. ಸದರಿ ಭೂ ಸ್ವಾಧೀನ ಅಧಿನಿಯದ ಪ್ರಕಾರ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನುಗಳ ಸಂಬಂಧದಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳವರ ಪ್ರಶಾಸನ ಕಾರ್ಯವನ್ನು ನಿರ್ವಹಿಸುವಂತೆ ಈ ಮೂಲಕ ನೇಮಿಸಲಾಗಿದೆ. ಮತ್ತು ಜಮೀನಿನ ಅಧಿಕೃತ ಸ್ವಾಧೀನ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ ಸದರಿ ಭೂಮಿಗಳಲ್ಲಿ ನಕಾಶೆಯನ್ನು ಪರಿವೀಕ್ಷಣೆಗಾಗಿ ವಿಶೇಷ ಭೂ ಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ದಾವಣಗೆರೆ **ತಾಲ್ಲೂಕು: ಹೊನ್ನಾಳಿ** **ಹೋಬಳಿ: ಗೋವಿಸಕೋವಿ-1** **ಗ್ರಾಮ: ದೊಡ್ಡೇರಿ**

ಕ್ರಮ ಸಂಖ್ಯೆ	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಅನುಭವದಾರರ ಹೆಸರು	ಸರ್ವೆ ನಂ.	ತರಹೆ	ಭೂಸ್ವಾಧೀನ ಜಮೀನಿನ ವಿವರ	
						ವಿಸ್ತೀರ್ಣ	ಆಕಾರ
						ಎ.ಗುಂ.	ರೂ.ಪೈ.
1	2	3	4	5	6	7	8
	ಡಿ.ಜಿ. ರಾಜಪ್ಪ ಬಿನ್ ಡಿ.ಜಿ. ಬಸಪ್ಪ ಡಿ.ಜಿ. ಸುರೇಶ ಬಿನ್ ಡಿ.ಜಿ. ಬಸಪ್ಪ	ಎಂ.ಆರ್. 22/2009-2011 ಪ್ರಗತಿ ಗ್ರಾಮೀಣಾ ಬ್ಯಾಂಕ್ ಶಿವಮೊಗ್ಗ ಇವರಿಗೆ ರೂ. 18300000/-ಗೆ ಆಧಾರ ಎಂ.ಆರ್.6/2009-2010 ಪ್ರಗತಿ ಗ್ರಾಮೀಣಾ ಬ್ಯಾಂಕ್ ಶಿವಮೊಗ್ಗ ಇವರಿಗೆ ರೂ. 600000/-ಗೆ ಆಧಾರ	ಸ್ವಂತ	77/2	ಖುಷ್ಕಿ	0-20	0-39
					ಒಟ್ಟು	**0-20**	

ಇಪ್ಪತ್ತು ಗುಂಟೆ ಮಾತ್ರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗಂಗರಾಮ ಬಡೇರಿಯಾ,

ಆಯುಕ್ತರು,

ಪುನರ್‌ವಸತಿ, ಪುನರ್ ನಿರ್ಮಾಣ ಹಾಗೂ ಭೂ ಸ್ವಾಧೀನ,

ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು

ಕಂದಾಯ ಇಲಾಖೆ, ಬಾಗಲಕೋಟೆ.

P.R. 80

ಕಂದಾಯ ಸಚಿವಾಲಯ

ಭೂಸ್ವಾಧೀನ ಆಧಿನೀಯಮದ 6(1)ನೇ ಪ್ರಕರಣದ ಮೇರೆಗೆ ಘೋಷಣೆ

ಕ್ರಮಾಂಕ : RD 13 AQK 2012 ದಿನಾಂಕ: 06/09/2012

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆಕೋಲಾರ ತಾಲ್ಲೂಕು, ಸುಗಟೂರು ಮತ್ತು ಹೋಳೂರು ಹೋಬಳಿಯ ತೂರಾಂಡಹಳ್ಳಿ ಮತ್ತು ವಾನರಾಶಿ ಗ್ರಾಮಗಳ ವಿವಿಧ ಸ.ನಂ.ಗಳಲ್ಲಿ ಒಟ್ಟು 1-20 ಎಕರೆ ಜಮೀನು ಚಿಕ್ಕಬಳ್ಳಾಪುರ-ಕೋಲಾರ ಮಾರ್ಗದ ರೈಲ್ವೆ ಲೈನ್ ಗೇಜ್ ಪರಿವರ್ತನೆಗಾಗಿ ಭೂ ಸ್ವಾಧೀನ. ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂದು Kolar ಜಿಲ್ಲೆಯ ಜಿಲ್ಲಾಧಿಕಾರಿಯವರು ಭೂಸ್ವಾಧೀನ ಕಾಯ್ದೆ 1894 ರ ಕಲಂ 4(1) ರ ಮೇರೆಗೆ ಅಧಿಸೂಚನೆ ಕ್ರಮಾಂಕ:LAQ/SR/22/2010-11, ದಿನಾಂಕ : 22/12/2011 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿದ್ದುದರಿಂದ,

ಕರ್ನಾಟಕ ಭೂಸ್ವಾಧೀನ ಕಾಯ್ದೆ 33/1991 ರನ್ವಯ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894ರ (ಕೇಂದ್ರ ಅಧಿನಿಯಮ 1894)(1) 6ನೇ ಪ್ರಕರಣದ ಮೇರೆಗೆ ಕೆಳಗೆ ಸೂಚಿಸಿರುವ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ, ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಜಮೀನುಗಳು ಅಗತ್ಯವಾಗಿವೆ ಎಂದು ಸದರಿ ಅಧಿನಿಯಮ 6(1) ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಸಹಾಯಕ ಅಯುಕ್ತರ ಕಛೇರಿ, ಕೋಲಾರ ಉಪ-ವಿಭಾಗ,Kolar ಇವರನ್ನು ಸದರಿ ಭೂಮಿಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಕೈಗೊಳ್ಳುವ ಎಲ್ಲಾ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಸದರಿ ಭೂಅರ್ಜನೆ ಅಧಿನಿಯಮದ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ ಹಾಗೂ ಸದರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಮೇಲ್ಕಂಡ ಭೂಸ್ವಾಧೀನ ಅಧಿನಿಯಮ 17ನೇ ಪ್ರಕರಣದ (1) ಉಪಪ್ರಕರಣ (4) ರ ಪ್ರಕರಣದಲ್ಲಿರುವ ಅಧಿಕಾರದ ಮೇಲೆ ಸದರಿ ಅಧಿನಿಯಮದ ಪ್ರಕರಣ 9ರಲ್ಲಿನ ಪ್ರಕರಣ 10 ರ ಪ್ರಕಾರ ಹೊರಡಿಸಲಾಗುವ ತಿಳುವಳಿಕೆಯನ್ನು ಪ್ರಕಟಿಸಿದ ದಿನಾಂಕದಿಂದ 15 ದಿನಗಳು ಕಳೆದ ನಂತರ ಸದರಿ ಜಮೀನನ್ನು ಸ್ವಾಧೀನಪಡೆಯಲು ನಿರ್ದೇಶಿಸಿರುತ್ತದೆ.ಸದರಿ ಭೂಮಿಗಳ ನಕಾಶೆಯನ್ನು ಪರಿವೀಕ್ಷಣೆಗಾಗಿ ಸಹಾಯಕ ಅಯುಕ್ತರ ಕಛೇರಿ, ಕೋಲಾರ ಉಪ-ವಿಭಾಗ, Kolar ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : Kolar ತಾಲ್ಲೂಕು : Kolar ಹೋಬಳಿ : ಸುಗಟೂರು ಗ್ರಾಮ : ತೂರಂಡ ಹಳ್ಳಿ

Agricultural

ಕ್ರ.ಸ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂಸ್ವಾಧೀನದ ಜಮೀನಿನ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಆಕಾರ
1	ವೆಂಕಟರಾಮಪ್ಪ/ನ್ಯಕಪ್ಪ		70/*/P1	ಖುಷ್ಕಿ					0.9.00	
									0.9.00	
2	ಮುನಿವೆಂಕಟಪ್ಪ/ಸೊಣ್ಣಪ್ಪ		70/*/P25	ಖುಷ್ಕಿ					0.2.00	
									0.2.00	
3	ಕೃಷ್ಣಪ್ಪ/ನಾಗಪ್ಪ		81/*/*	ಖುಷ್ಕಿ					0.8.00	
									0.8.00	
4	ಮುನವೆಂಕಟಪ್ಪ/ಸೊಣ್ಣಪ್ಪ		82/*/*	ಖುಷ್ಕಿ					0.15.00	
									0.15.00	
								Village Extents: 0.34.00		

ಅನುಸೂಚಿ

ಜಿಲ್ಲೆ : Kolar ತಾಲ್ಲೂಕು : Kolar ಹೋಬಳಿ : ಹೋಳೂರು ಗ್ರಾಮ : ವಾನರಾಶಿ

Agricultural

ಕ್ರ.ಸ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂಸ್ವಾಧೀನದ ಜಮೀನಿನ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಆಕಾರ
1	ವೆಂಕಟಮ್ಮ/ಮುನೆಪ್ಪ		112/*/B11	ಖುಷ್ಕಿ					0.3.00	
									0.3.00	
2	ಮುನಿಯಪ್ಪ/ಮೂರ್ತೆಪ್ಪ		152/*/*	ಖುಷ್ಕಿ					0.11.00	
									0.11.00	
								Village Extents: 0.14.00		

DESIGNATION : ಸಹಾಯಕ ಆಯುಕ್ತರು

LAOCIRCLE : ಸಹಾಯಕ ಆಯುಕ್ತರ ಕಛೇರಿ, ಕೋಲಾರ ಉಪ-ವಿಭಾಗ

LAOLOCATION : ಕೋಲಾರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂಸ್ವಾಧೀನ-2)

P.R. 110

ಸೂಚನೆ: "ಈ ಹಿಂದೆ ದಿನಾಂಕ 7/9/2012ರ ಭಾಗ VI ಪುಟ ಸಂಖ್ಯೆ 816–817 ರಾಜ್ಯಪತ್ರದಲ್ಲಿ ತೂರಂಡ ಹಳ್ಳಿ ಮಾತ್ರ ಪ್ರಕಟಣೆಯಾಗಿದ್ದು 'ವಾನರಾಶಿ ಗ್ರಾಮ' ತಾಂತ್ರಿಕ ದೋಷದಿಂದ ಬಿಟ್ಟು ಹೋಗಿರುತ್ತದೆ. ಈಗ ಪ್ರಕಟಿತವಾಗುತ್ತಿರುವ ರಾಜ್ಯಪತ್ರದಲ್ಲಿ ಬಿಟ್ಟು ಹೋಗಿರುವ ವಾನರಾಶಿ ಗ್ರಾಮವನ್ನು ಸೇರಿಸಿದಂತೆ ಸದರಿ ಅಧಿಸೂಚನೆಯನ್ನು ಪುನರ್ ಪ್ರಕಟಿಸಲಾಗುತ್ತಿದೆ ಹಾಗೂ ದಿನಾಂಕ: 7/9/2012ರಂದು ಪ್ರಕಟಿಸಲಾಗಿರುವ ಅಧಿಸೂಚನೆ ಗೌಣವಾಗುತ್ತಿದೆ."

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು.